REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 31 | ಸಂಚಿಕೆ : 34 | 27 ನವೆಂಬರ್ 2024 | ಬುಧವಾರ | ಪುಟಗಳು : 8 | ಬೆಲೆ : 2/-

## ವೈಶ್ಯ ಕೋ-ಆಪರೇಟಿವ್ ಬ್ಯಾಂಕ್ ಶತಮಾನೋತ್ಸವ ಸಮಾರಂಭ

## ವೈಶ್ಯ ಕೋ-ಆಪರೇಟಿವ್ ಬ್ಯಾಂಕ್‌ನ 100ವರ್ಷದ ಸಾಧನೆ ಪ್ರಶಂಸನೀಯ



**ತುಮಕೂರು** : ನಗರದ ಹೆಗ್ಗೆರೆಯ ಡಾ. ಹೆಚ್.ಎಂ. ಗಂಗಾಧರಯ್ಯ ಮೆಮೋರಿಯಲ್ ಹಾಲ್‌ನಲ್ಲಿ ವೈಶ್ಯ ಕೋ-ಆಪರೇಟಿವ್ ಬ್ಯಾಂಕಿನ ಶತಮಾನೋತ್ಸವ ಸಮಾರಂಭವನ್ನು ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣ ರವರು ಉದ್ಘಾಟಿಸಿ, ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿ ವೈಶ್ಯ ಬ್ಯಾಂಕ್‌ನ 100 ವರ್ಷದ ಸಾಧನೆ ಪ್ರಶಂಸನೀಯ. ಒಂದು ಸಂಸ್ಥೆಯ ಪ್ರಾರಂಭ ಸುಲಭ. ಆದರೆ ಅದೇ ಸಂಸ್ಥೆ 100 ವರ್ಷಗಳ ಕಾಲ ಗ್ರಾಹಕರ ಸೇವೆ ಮಾಡಿ, ವಿಶ್ವಾಸದೊಂದಿಗೆ ಮುನ್ನಡೆದಿದೆ ಎಂದರೆ ಅದು ಸುಲಭ ಸಾಧನೆಯಲ್ಲ. ಇಂತಹ ಸಾಧನೆಯನ್ನು ವೈಶ್ಯ ಕೋ ಆಪರೇಟಿವ್ ಬ್ಯಾಂಕ್ ಮಾಡಿದೆ. 106 ಕೋಟಿ ರಿಸರ್ವ್ ಫಂಡ್ ಹೊಂದಿರುವುದು ಬ್ಯಾಂಕಿನ ಹೆಗ್ಗಳಿಕೆಯಾಗಿದೆ. ಬ್ಯಾಂಕಿನ ನಿರ್ದೇಶಕರಾದವರು ಧರ್ಮದರ್ಶಿಯಂತೆ ಕಾರ್ಯನಿರ್ವಹಿಸಬೇಕಿದ್ದು, ಬ್ಯಾಂಕನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಿಕೊಂಡು ಬಂದ ಹಿಂದಿನ ಅಧ್ಯಕ್ಷರು ಆಡಳಿತ ಮಂಡಳಿಯವರು, ದಶಕದಿಂದ ಅಧ್ಯಕ್ಷರಾಗಿರುವ ಕೆ.ಎನ್.ಗೋವಿಂದರಾಜು, ಉಪಾಧ್ಯಕ್ಷ ರಾಮಮೂರ್ತಿ, ನಿರ್ದೇಶಕ ಮಂಡಳಿ ಕಾರ್ಯ ಶ್ಲಾಘನೀಯ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಮೆಚ್ಚುಗೆ ವ್ಯಕ್ತಪಡಿಸಿದರು.

**ವೈಶ್ಯರು ಮಾದರಿ :** ರಾಜಕೀಯವಾಗಿ ನಾನು ಮಧುಗಿರಿಯಲ್ಲಿದ್ದರೂ, ನನ್ನ ಕರ್ಮ ಭೂಮಿ ತುಮಕೂರು, 1994ರಲ್ಲಿ ನಾನು ತುಮಕೂರು ಕ್ಷೇತ್ರದಿಂದ ಚುನಾವಣೆಗೆ ನಿಂತಾಗ ಎಲ್ಲ ಹಿಂದುಳಿದ, ಮುಂದುವರೆದ ಸಮಾಜಗಳು ಕೈಹಿಡಿದು ಸುಮಾರು 26ಸಾವಿರ ಮತಗಳು ಪಡೆಯಲು ಸಾಧ್ಯವಾಯಿತು. ಆನಂತರಾಮಶೆಟ್ಟರು ಅಂದಿಗೆ ಸುಮಾರು 500 ಜನರ ಪಟ್ಟಿ ನೀಡಿ, ಮತ ಹಾಕಿಸುವ ಭರವಸೆ ನೀಡಿದ್ದರು ಎಂದು ಹೇಳಿ ವೈಶ್ಯ ಸಮುದಾಯ ಇತರ ಸಮುದಾಯಗಳಿಗೆ ಮಾದರಿ ಸಮುದಾಯ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ವೈಶ್ಯ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಕೆ.ಎನ್. ಗೋವಿಂದರಾಜು ಅವರು, 1925ರಲ್ಲಿ ನಮ್ಮ ಪೂರ್ವಜರಾದ ಎ.ವಿ.ನಂಜುಂಡಶೆಟ್ಟಿ ಅವರು 1925ರಲ್ಲಿ ಆರಂಭವಾದ

2ನೇ ಪುಟಕ್ಕೆ...

### ಮಡಿಕೇರಿಯಲ್ಲಿ ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರಿಗೆ ಮತ್ತು ವೃತ್ತಿಪರ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣ

ದಿನಾಂಕ : 12.12.2024ರಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿ ಸದಸ್ಯರು / ವೃತ್ತಿಪರ ನಿರ್ದೇಶಕರುಗಳಿಗೆ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಒಂದು ದಿನದ ರಾಜ್ಯಮಟ್ಟದ ವಿಚಾರ ಸಂಕಿರಣವನ್ನು "ನ್ಯೂ ರಾಜದರ್ಶನ ಪಾರ್ಟಿ ಹಾಲ್", ರಾಜಸೀಟ್ ಹತ್ತಿರ, ಎಮ್.ಜಿ.ರಸ್ತೆ, ಮಡಿಕೇರಿ ಇಲ್ಲಿ ಏರ್ಪಡಿಸಲಾಗಿದೆ. ಈ ವಿಚಾರ ಸಂಕಿರಣದಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಯ ಮತ್ತು ವೃತ್ತಿಪರ ನಿರ್ದೇಶಕರುಗಳ ಪಾತ್ರ, ಭಾರತೀಯ ರಿಜರ್ವ್ ಬ್ಯಾಂಕಿನ ಇತ್ತೀಚಿನ ಸುತ್ತೋಲೆ ಹಾಗೂ ಮಾರ್ಗಸೂಚಿಗಳು, ಪಟ್ಟಣ ಸಹಕಾರ ಬ್ಯಾಂಕುಗಳು ಆದ್ಯತಾ ವಲಯಕ್ಕೆ ಸಾಲ ವಿತರಣೆ, ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸ ತಂತ್ರಾಂಶ ಅಳವಡಿಕೆ ವಿಷಯಗಳ ಕುರಿತು ನುರಿತ ತಜ್ಞರುಗಳಿಂದ ಉಪನ್ಯಾಸ ನೀಡಲಾಗುವುದು. ಈ ವಿಚಾರ ಸಂಕಿರಣದಲ್ಲಿ ಒಂದು ಬ್ಯಾಂಕಿನಿಂದ ಗರಿಷ್ಠ 6 ಪ್ರತಿನಿಧಿಗಳಿಗೆ ಅವಕಾಶ ಕಲ್ಪಿಸಲಾಗಿದೆ. ಈ ಸದರಿ ವಿಚಾರ ಸಂಕಿರಣದಲ್ಲಿ ಭಾಗವಹಿಸುವವರು ಮಹಾಮಂಡಳದಲ್ಲಿ ದಿನಾಂಕ : 07.12.2024ರೊಳಗಾಗಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಈ ವಿಚಾರ ಸಂಕಿರಣದಲ್ಲಿ ತಾವುಗಳು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.

3 ಚೈತನ್ಯ ಮಹಿಳಾ ಸಹಕಾರ ಬ್ಯಾಂಕ್ : 11ನೇ ಶಾಖೆಯ ಉದ್ಘಾಟನೆ

4 ಶ್ರೀ ದುರ್ಗಾದೇವಿ ಮಹಿಳಾ ಸಹಕಾರಿ ಬ್ಯಾಂಕ ನಿ., ಕಾರವಾರ : ಶಿರಸಿ ಶಾಖೆಯ ಉದ್ಘಾಟನಾ ಸಮಾರಂಭ

7 ನಿಮ್ಮ ಪ್ರಶ್ನೆ - ನಮ್ಮ ಉತ್ತರ

## ಸಂಪಾದಕೀಯ

## ಆತ್ಮೀಯ ಸಹಕಾರಿಗಳೇ...



# ಭಾವೈಕ್ಯದಲಿ ಕೂಡಿ ಮುಂದೆ ನಡೆಯುವುದೇ ನಮ್ಮ ಸಂವಿಧಾನದ ಆಶಯ

ಭಾರತೀಯರಾದ ನಮಗೆ ನವೆಂಬರ್ 26, ತುಂಬ ಮಹತ್ವದ ದಿನವಾಗಿದೆ. ದೇಶದ ಸ್ವಾತಂತ್ರ್ಯಾನಂತರ ನಮ್ಮದೇ ಆದ ಒಂದು ಸಂವಿಧಾನವನ್ನು ರೂಪಿಸುವ ಬೃಹತ್ ಕೆಲಸವನ್ನು ಸಂವಿಧಾನ ರಚನಾ ಸಭೆಗೆ ವಹಿಸಲಾಯಿತು. ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದ ಈ ಸಂವಿಧಾನ ರಚನಾ ಸಭೆಯಲ್ಲಿ, ದೇಶದ ವಿವಿಧ ರಾಜ್ಯಗಳ, ಧರ್ಮಗಳ, ಭಿನ್ನ ಭಾಷೆ, ಸಂಸ್ಕೃತಿಗೆ ಸೇರಿರುವ ಹಾಗೂ ಎಡ–ಬಲಪಂಥಿಯರು ಸೇರಿದಂತೆ 250 ಮಹಾ ಮೇಧಾವಿ ಸದಸ್ಯರಿದ್ದರು.

ಸಂವಿಧಾನ ರಚನಾ ಸಭೆ ಎರಡು ವರ್ಷ ಹನ್ನೊಂದು ತಿಂಗಳು ಹದಿನೆಂಟು ದಿನಗಳ ಸುದೀರ್ಘ ಕಾಲ ಐದು ಅಧಿವೇಶನಗಳನ್ನು ನಡೆಸಿ, ಪ್ರತೀ ವಿಷಯಗಳ ಕುರಿತೂ ಪರಸ್ಪರ ಚರ್ಚೆ–ಸಂವಾದಗಳು ನಡೆದವು. ಹೀಗೆ ಪರ–ವಿರೋಧ ಚರ್ಚೆಗಳ ನಂತರ, ಎಲ್ಲರಿಗೂ ಒಪ್ಪಿತವಾದ ಒಂದು ಸಂವಿಧಾನದ ಕರಡನ್ನು ರೂಪಿಸಿ ಸಭೆಯಲ್ಲಿ ಮಂಡಿಸಲಾಯಿತು.

ಸಂವಿಧಾನದ ಕರಡು ಪ್ರತಿಗೆ ಒಪ್ಪಿಗೆ ನೀಡುವುದಕ್ಕೂ ಮೊದಲು, ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ಸಭೆಯನ್ನು ಉದ್ದೇಶಿಸಿ, 'ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕಿಂತಲೂ ದೇಶ ಕಟ್ಟುವ ಈ ಪ್ರಕ್ರಿಯೆಯೇ ಹೆಚ್ಚು ಮಹತ್ವದ್ದು ಮತ್ತು ಹೆಚ್ಚು ಕಠಿಣವಾದುದು. ಸಂವಿಧಾನ ಒಂದು ಯಂತ್ರದ ಹಾಗೆ, ಅದಕ್ಕೆ ಜೀವವಿಲ್ಲ. ಸಂವಿಧಾನವನ್ನು ಯಾರು ನಿಯಂತ್ರಿಸುತ್ತಾರೋ, ಯಾರು ಅದನ್ನು ಕಾರ್ಯಗತಗೊಳಿಸುತ್ತಾರೋ ಅವರಿಂದಲೇ ಅದಕ್ಕೆ ಜೀವ ಬರುತ್ತದೆ. ಆದ್ದರಿಂದ, ಜನರು ಆಯ್ಕೆ ಮಾಡುವ ವ್ಯಕ್ತಿ ಸದ್ಗುಣಿಯಾಗಿರಬೇಕು, ಆತನಿಗೆ ಎಲ್ಲರನ್ನೂ ಒಳಗೊಳ್ಳುವ ಗುಣ ಇರಬೇಕು. ಒಂದು ವೇಳೆ ಜನರು ಆಯ್ಕೆ ಮಾಡಿದ ವ್ಯಕ್ತಿಗೆ ಈ ಯಾವ ಗುಣಗಳೂ ಇಲ್ಲದಿದ್ದರೆ, ಸಂವಿಧಾನವೂ ಈ ದೇಶವನ್ನು ರಕ್ಷಿಸಲು ಸಾಧ್ಯವಿಲ್ಲ...' ಎಂದು ಗಂಭೀರವಾಗಿ ನುಡಿದರು.

ನಂತರ, ಎಲ್ಲ ಸದಸ್ಯರ ಒಕ್ಕೊರಳ ಸಮ್ಮತಿಯೊಂದಿಗೆ ಸಂವಿಧಾನವನ್ನು ಕರಡು ಪ್ರತಿಯನ್ನು ಅಂಗೀಕರಿಸಿ, ಅಳವಡಿಕೆ ಮಾಡಿಕೊಳ್ಳಲಾದ ದಿನವೇ 1949ರ ನವಂಬರ್ 26. ಅಂದು ನ್ಯಾಯ ಹಾಗೂ ಸಮಾನತೆಯ ಆಧಾರದಲ್ಲಿ ದೇಶದ ಪುನರ್ ನಿರ್ಮಾಣ ಕಾರ್ಯಕ್ಕೆ ನಮ್ಮ ಗಣರಾಜ್ಯವು ಮುಂದಾಗಬೇಕೆಂದು ಸಂವಿಧಾನ ಸಭೆ ನಿರ್ದೇಶಿಸಿತು.

ದೇಶಕ್ಕೆ ಸಂವಿಧಾನವೇ ಸರ್ವೋಚ್ಚವಾದುದು. ನಮ್ಮ ಸಂವಿಧಾನದ ಮೂಲ ತತ್ವಗಳು, ಆಶಯಗಳು ಮತ್ತು ಸಿದ್ಧಾಂತಗಳನ್ನು ಸಾರಾಂಶ ರೂಪದಲ್ಲಿ ತಿಳಿಸುವ ಸಂವಿಧಾನದ ಪ್ರಸ್ತಾವನೆಯನ್ನು ನಾವೆಲ್ಲರೂ ತಿಳಿಯಬೇಕಿದೆ.

ಕನ್ನಡದ ಹೆಸರಾಂತ ಗೀತೆ ರಚನೆಕಾರ ಹಾಗೂ ಸಂಗೀತ ಸಂಯೋಜಕರಾದ ಪದ್ಮಚರಣ್ ಅವರು ಸಂವಿಧಾನದ ಆಶಯವನ್ನು ಅರವತ್ತು–ಎಪ್ಪತ್ತರ ದಶಕದಲ್ಲಿ ರೇಡಿಯೊದಲ್ಲಿ ಬಿತ್ತರವಾಗುತ್ತಿದ್ದ ಈ ಗೀತೆಯಲ್ಲಿ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ.

ಭಾರತೀಯರು ನಾವು ಎಂದೆಂದೂ ಒಂದೇ
ಭಾವೈಕ್ಯದಲಿ ಕೂಡಿ ನಡೆಯುವೆವು ಮುಂದೆ॥
ನೂರು ಮತ ನಮಗಿರಲಿ ನೂರು ಮಾತಾಗಿರಲಿ
ನಾಡಿನಾ ಜನಮನ ನಾವೆಲ್ಲ ಒಂದೇ
ನಾಡ ರಕ್ಷಣೆಗಾಗಿ ನಡೆಯುವೆವು ಮುಂದೆ॥

ಪದ್ಮಚರಣ್ ಅವರು ಇಂದು ಇಲ್ಲವಾದರೂ, ಅವರ ಗೀತೆ ಸದಾ ನನ್ನ ಎದೆಯಲ್ಲಿ ಅನುರಣಿಸುತ್ತಿರುತ್ತದೆ. ಇಂದು ಈ ಗೀತೆ ಎಲ್ಲರ ಎದೆಯಲ್ಲೂ ಅನುರಣಿಸಲಿ ಎಂದು ಆಶಿಸುತ್ತೇನೆ.

▸▸ ಎಚ್.ಕೆ. ಪಾಟೀಲ

...1ನೇ ಪುಟದಿಂದ

ವೈಶ್ಯ ಕೋ ಆಪರೇಟಿವ್ ಸೊಸೈಟಿ 1978ರಲ್ಲಿ ಬ್ಯಾಂಕಾಗಿ ಪರಿವರ್ತನೆಗೊಂಡಿತು. ಹಿಂದಿನ ಎಲ್ಲಾ ಹಿರಿಯರ ಶ್ರಮದಿಂದ ಪ್ರಸಕ್ತ ಬ್ಯಾಂಕ್ 8 ಶಾಖೆಯನ್ನು ಹೊಂದಿ ಆಧುನಿಕ ಸೇವಾ ಸೌಲಭ್ಯದೊಂದಿಗೆ ಜಿಲ್ಲೆಯ ಹಣಕಾಸು ಸಂಸ್ಥೆಗಳಲ್ಲಿಯೇ ಮುಂಚೂಣಿಯಲ್ಲಿದೆ. ಸದಸ್ಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲಸೌಲಭ್ಯ, ವಿಮೆ ಸೌಲಭ್ಯವನ್ನು ಒದಗಿಸಿದೆ ಎಂದರು.

**ಬ್ಯಾಂಕ್ ಸಹಕಾರ ಮರೆಯುವಂತಿಲ್ಲ :** ಶಾಸಕ ಜಿ.ಬಿ.ಜೋಶಿ ಗಣೇಶ್ ಮಾತನಾಡಿ, ಸಿಐಟಿ ಶಿಕ್ಷಣ ಸಂಸ್ಥೆಯ ಬೆಳವಣಿಗೆಯೇ ಹಿಂದೆ ವೀರಶೈವ ಸಹಕಾರಿ ಬ್ಯಾಂಕ್ ಹಾಗೂ ವೈಶ್ಯ ಕೋ–ಆಪರೇಟಿವ್ ಬ್ಯಾಂಕಿನ ಸಹಕಾರ ಇದೆ. ಸಹಕಾರ ಸಂಸ್ಥೆಗಳನ್ನು ಎಂದಿಗೂ ಸ್ಮರಿಸುತ್ತೇನೆ. ಕಳೆದ 10 ವರ್ಷಗಳಿಂದ ಗೋವಿಂದರಾಜು ಮತ್ತು ರಾಮಮೂರ್ತಿ ಅವರುಗಳ ನೇತೃತ್ವದಲ್ಲಿ ಬ್ಯಾಂಕ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಬ್ಯಾಂಕ್ ಶತಮಾನದ ಸಾಧನೆ ಹಿಂದೆ ಎಲ್ಲಾ ಹಿಂದಿನವರ ಕೊಡುಗೆಯಿದ್ದು ಬ್ಯಾಂಕ್ ಮತ್ತಷ್ಟು ಗ್ರಾಹಕರ ಸೇವೆಯಲ್ಲಿ ತೊಡಗಲಿ ಎಂದು ಹಾರೈಸುವುದಾಗಿ ತಿಳಿಸಿದರು.

**ಉತ್ತಮ ಹಣಕಾಸು ನಿರ್ವಾಹಕರು:** ವಿಧಾನ ಪರಿಷತ್ ಸದಸ್ಯ ಡಿ.ಎಸ್. ಅರುಣ್ ಕುಮಾರ್ ಮಾತನಾಡಿ, ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವ ಬ್ಯಾಂಕಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಿರುವುದು ನಮ್ಮ ಸುದೈವ, ವೈಶ್ಯ ಸಮಾಜ ರಾಜ್ಯದಲ್ಲಿ ಅಲ್ಪಸಂಖ್ಯಾತ ಸಮಾಜ. ಎಲ್ಲ ಬ್ಯಾಂಕುಗಳ ಎನ್.ಪಿ.ಎ. ಕಡಿಮೆ ಇದೆ. ಸರಕಾರ ಹೊಸದಾಗಿ ಜಾರಿಗೆ ತಂದ ಕೋ–ಅಪರೇಟಿವ್ ಬಿಲ್‌ಗೆ ಹೆಚ್ಚು ವಿರೋಧ ವ್ಯಕ್ತಪಡಿಸಿದ್ದು ನಾನು. ಏಕೆಂದರೆ ನಿಯಮ ಜಾಸ್ತಿಯಾದರೆ ಸಂಸ್ಥೆ ನಡೆಸಲು ಸಾಧ್ಯವಿಲ್ಲವೆಂಬುದು ನಮ್ಮ ವಾದವಾಗಿದೆ ಎಂದರು.

ವೇದಿಕೆಯಲ್ಲಿ ಆರ್ಯವೈಶ್ಯ ಮಂಡಳಿ ಅಧ್ಯಕ್ಷ ಡಾ. ಆರ್. ಎಲ್. ರಮೇಶ್ ಬಾಬು, ವೈಶ್ಯ ಕೋ–ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷ ರಾಮಮೂರ್ತಿ, ಸಿ.ಇ.ಓ ಸುಮ ಸೇರಿದಂತೆ ಬ್ಯಾಂಕಿನ ನಿರ್ದೇಶಕರುಗಳಾದ ಎಂ. ನಾಗಸುಂದರ್, ಬಿ.ಎಸ್. ಲೋಕನಾಥ್, ಟಿ.ಎಸ್. ಪ್ರಸೂನ್‌ಮಾಕಂ, ಎನ್.ವಿ. ಬಾಲಾಜಿ, ಎನ್.ಎ. ಅರುಣ್‌ಕುಮಾರ್, ಕೆ. ವೆಂಕಟರಾಜು, ಬಿ.ಎ. ಲಕ್ಷ್ಮಿಕಾಂತ ಶೆಟ್ಟಿ, ಟಿ. ನರಸಿಂಹಮೂರ್ತಿ, ಕೆ.ಆರ್. ರಾಜಶೇಖರ್, ಸಿ.ಎಸ್. ಸಂಜಯ್, ಡಿ.ಎಲ್.ಲಕ್ಷ್ಮೀಪತಿ, ಟಿ.ಎ. ಪಾರ್ಥಸಾರಥಿ, ಎಲ್.ಎ. ರಾಘವೇಂದ್ರ, ಸಿ.ಬಿ. ಕನಕಲಕ್ಷ್ಮಿ, ಗೀತಾ ಬಾಲರಾಜು ಹಾಗೂ ಲಕ್ಷ್ಮೀಕಾಂತರಾಜೇ ಅರಸ್ ಸೇರಿ ಸಿಬ್ಬಂದಿವರ್ಗದವರಿದ್ದರು. ಬ್ಯಾಂಕಿನ ಹಾಲಿ, ಮಾಜಿ ಆಡಳಿತ ಮಂಡಳಿಯವರನ್ನು ಸನ್ಮಾನಿಸಲಾಯಿತು. ಬ್ಯಾಂಕಿನ ನಡೆದು ಬಂದ ಹಾದಿಯ ಸಾಕ್ಷ್ಯಚಿತ್ರ, ಸ್ಮರಣ ಸಂಚಿಕೆ, ಅಂಚೆಚೀಟಿ ಬಿಡುಗಡೆ ಮಾಡಲಾಯಿತು.

### 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ

## ಪಟ್ಟಣ ಸಹಕಾರ ಬ್ಯಾಂಕುಗಳ ವಾರ್ತಾ ಪತ್ರಿಕೆಯ ವಿಶೇಷ ಸಂಚಿಕೆ ಬಿಡುಗಡೆ



ದಿನಾಂಕ : 18.11.2024ರಂದು ಬೀದರನಲ್ಲಿ ಜರುಗಿದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಮಹಾಮಂಡಳದ ಪಟ್ಟಣ ಸಹಕಾರ ಬ್ಯಾಂಕುಗಳ ವಿಶೇಷ ವಾರ್ತಾ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು.

## ಚೈತನ್ಯ ಮಹಿಳಾ ಸಹಕಾರ ಬ್ಯಾಂಕ್ : 11ನೇ ಶಾಖೆಯ ಉದ್ಘಾಟನೆ

ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ ನಿ., ವಿಜಯಪುರ ಇದರ 11ನೇ ಶಾಖೆಯನ್ನು ಇತ್ತೀಚೆಗೆ ಇಂಡಿ ಪಟ್ಟಣದಲ್ಲಿ ಶ್ರೀಮತಿ ಮಲ್ಲಮ್ಮ ಶಿ. ಯಾಳವಾರ ಇವರ ಸಂಸ್ಥಾಪಕ ಅಧ್ಯಕ್ಷತೆಯಲ್ಲಿ ಹಾಗೂ ಪರಮ ಪೂಜ್ಯ ಶ್ರೀ ಷ. ಬ್ರ. ಅಭಿನವ ಮುರುಗೇಂದ್ರ ಶಿವಾಚಾರ್ಯ ಸ್ವಾಮಿಗಳು, ಸಂಸ್ಥಾನ ಹಿರೇಮಠ ಶಿರಶ್ಯಾಡ ಇವರ ದಿವ್ಯ ಸಾನಿಧ್ಯದಲ್ಲಿ ಜರುಗಿತು. ಸದರಿ ಉದ್ಘಾಟನೆಯನ್ನು ಶ್ರೀ ವಿಠಲಗೌಡ ಯಶವಂತರಾಯಗೌಡ ಪಾಟೀಲ ಯುವ ಕಾಂಗ್ರೆಸ್ ಮುಖಂಡರು ಇವರು ಉದ್ಘಾಟನೆ ಕೈಕೊಂಡರು.

ಮುಖ್ಯ ಅತಿಥಿಗಳಾದ ಡಾ॥ ಭಾರತಿ ಅ. ಗಜಾಕೋಶ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು ಉಪಸ್ಥಿತರಿದ್ದು ಭದ್ರತಾ ಕೊಠಡಿಯನ್ನು ಉದ್ಘಾಟಿಸಿದರು. ಶ್ರೀ ಕನಕಪ್ಪ ವಡ್ಡರ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇಂಡಿ ಹಾಗೂ ಡಾ॥ ಅಶೋಕ ಹ. ಪಾಟೀಲ ಅಧ್ಯಕ್ಷರು ಶ್ರೀ ರೇವಣಸಿದ್ದೇಶ್ವರ ಸಹಕಾರಿ ಬ್ಯಾಂಕ ಇಂಡಿ ಮತ್ತು ಶ್ರೀ ಶೇಖರ ನಾಯಕ ಮಾಜಿ ತಾಲೂಕಾ ಪಂಚಾಯತ ಅಧ್ಯಕ್ಷರು ಇಂಡಿ ಇವರು ಕೂಡ ಸಭೆಯಲ್ಲಿ ಉಪಸ್ಥಿತರಿದ್ದರು.

ಅದೇ ರೀತಿಯಾಗಿ ಶ್ರೀ ಎಂ.ಆರ್. ಪಾಟೀಲ ಬಳ್ಳೊಳ್ಳಿ ಉಪಾಧ್ಯಕ್ಷರು ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ ಮರಗೂರ ಹಾಗು ಅಧ್ಯಕ್ಷರು ಶಾಂತೇಶ್ವರ ವಿವಿದೊದ್ದೇಶಗಳ ಸಹಕಾರಿ ಸಂಘ ನಿಯಮಿತ ಹೊರ್ತಿ ಇವರು ಮಹಿಳಾ ಸಬಲೀಕರಣ ಮಾಡುವಲ್ಲಿ ರಾಣಿ ಚನ್ನಮ್ಮನ ಹಾಗೆ ಸಮಾಜ ಸೇವೆ ಮಾಡುತ್ತಾ ಬಂದಿದ್ದು ಇವರ ಸೇವೆ ಅವಿಸ್ಮರನೀಯ. ಅವರ ಬ್ಯಾಂಕು ಮುಂದೆ ಚನ್ನಾಗಿ ಬೆಳೆದು ಎಲ್ಲ ಮಹಿಳೆಯರಿಗೆ ಸಹಾಯ ಮಾಡುವಂತಾಗಲಿ ಎಂದು ಹಾರೈಸಿದರು. ಅದೇ ರೀತಿಯಾಗಿ ವಿಠಲ ಯ.ಪಾಟೀಲ ಅವರು ಕೂಡ ಮಹಿಳೆಯರಿಗಾಗಿ ಈ ಇಂಡಿ ಪಟ್ಟಣದಲ್ಲಿ ಬ್ಯಾಂಕಿನ ಶಾಖೆಯನ್ನು ತೆಗೆದಿದ್ದು ಒಳ್ಳೆಯದು, ಈ ಬ್ಯಾಂಕಿಗೆ ಯಾವೂದೇ ಸಹಾಯ ಬೇಕಾದಲ್ಲಿ ನಾವು ಸಹಾಯ ಮಾಡಲು ಸದಾ ಸಿದ್ಧರಿದ್ದೇವೆ ಎಂದು ತಿಳಿಸುತ್ತಾ, ಬ್ಯಾಂಕು ಬರುವ ದಿನಗಳಲ್ಲಿ ಚೆನ್ನಾಗಿ ಬೆಳೆದು ಎಲ್ಲಾ ಮಹಿಳೆಯರು ಆರ್ಥಿಕವಾಗಿ ಸಬಲರಾಗಬೇಕೆಂದು ಹೇಳಿದರು.

ಶ್ರೀಮತಿ ಮಲ್ಲಮ್ಮ ಶಿ.ಯಾಳವಾರ ಇವರ ನಾಯಕತ್ವದಲ್ಲಿ ಹಾಗೂ ಸಿಬ್ಬಂದಿ ವರ್ಗದ ಪರಿಶ್ರಮದಿಂದ ನೂರು ಶಾಖೆಯನ್ನು ಪ್ರಾರಂಭಿಸಬಹುದೆಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕು ಉತ್ತರೋತ್ತರ



ವಾಗಿ ಅಭಿವೃದ್ಧಿಹೊಂದಲಿ ಎಂದು ಸ್ವಾಮಿಜಿಯವರು ಹಾರೈಸಿದರು. ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕ ನಿ., ವಿಜಯಪುರ ಇದರ 1ನೇ ಶಾಖೆಯನ್ನು ಶ್ರೀ ಶ್ರೀ ಶ್ರೀ ಸಿದ್ದೇಶ್ವರ ಸ್ವಾಮಿಗಳು ಜ್ಞಾನ ಯೋಗಾಶ್ರಮ ಇವರ ದಿವ್ಯ ಸಾನಿಧ್ಯದಲ್ಲಿ ಜರುಗಿದ್ದು ಇವತ್ತು 11ನೇ ಶಾಖೆಯನ್ನು ನಮ್ಮ ಅಮೃತ ಹಸ್ತದಿಂದ ನೆರವೇರಿಸಿದ್ದು ನಮ್ಮ ಪುಣ್ಯ ಎಂದು ಸ್ಮರಿಸಿದರು. ಈ ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲ ಅತಿಥಿ ಮಾನ್ಯರನ್ನು ಶ್ರೀಮತಿ ಪ್ರಭಾವತಿ ಎ ಪಾಟೀಲ ವ್ಯವಸ್ಥಾಪಕರು ಜಮಖಂಡಿ ಶಾಖೆ ಸ್ವಾಗತ ಮಾಡಿ ಬರಮಾಡಿಕೊಂಡರು.

ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ಸಮನ್ವಯ ಚೆನ್ನಾಗಿದ್ದು ಬ್ಯಾಂಕು ಅಭಿವೃದ್ಧಿ ಪಥದಲ್ಲಿ ಸಾಗಲು ಕಾರಣವಾಗಿದೆ. ಮಾನ್ಯ ಅಧ್ಯಕ್ಷರು ಶ್ರೀಮತಿ ಮಲ್ಲಮ್ಮ ಶಿ ಯಾಳವಾರ ಚೈತನ್ಯ ಮಹಿಳಾ ಸಹಕಾರಿ ಬ್ಯಾಂಕಿನ ಅಭಿವೃದ್ಧಿ ಕುರಿತು ವಿವರಿಸಿದರು. ತಮ್ಮ ಕಳೆದ 30 ವರ್ಷಗಳಿಂದ ಬ್ಯಾಂಕಿನೊಂದಿಗೆ ನಿರಂತರ ವ್ಯವಹಾರ ಮಾಡುತ್ತಿದ್ದ ಬ್ಯಾಂಕಿನ ಅತ್ಯುತ್ತಮ ಗ್ರಾಹಕರಿಗೆ ಸನ್ಮಾನ ಕೈಕೊಳ್ಳಲಾಯಿತು. ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಲಕ್ಷ್ಮೀ ಆರ್. ಬಳಗೊಂಡ ಇವರು ಬ್ಯಾಂಕಿನ ಕುರಿತು ಪ್ರಾಸ್ತಾವಿಕ ನುಡಿ ಹೇಳಿದರು.

ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಮೈತ್ರಾ ಬಾಗೇವಾಡಿ ಪ್ರಧಾನ ಶಾಖೆಯ ವ್ಯವಸ್ಥಾಪಕರು ಮಾಡಿದರು. ಕೊನೆಯದಾಗಿ ಈ ಕಾರ್ಯಕ್ರಮಕ್ಕೆ ಆಗಮಿಸಿದಂತೆ ಎಲ್ಲ ಗಣ್ಯಮಾನ್ಯರಿಗೆ ಶ್ರೀಮತಿ ರಾಜೇಶ್ವರಿ ಬಿ.ಬಿರಾದಾರ ಇವರ ವಂದನಾರ್ಪಣೆ ಹೇಳಿದರು.

# ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ




ತುಮಕೂರು ವೀರಶೈವ ಸಹಕಾರ ಬ್ಯಾಂಕಿನ ವತಿಯಿಂದ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರೂ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರೂ ಆದ ಸನ್ಮಾನ್ಯ ಶ್ರೀ ಎಚ್. ಕೆ.ಪಾಟೀಲರವರಿಗೆ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಜೆ.ರುದ್ರಪ್ಪ ರವರು, ನಿರ್ದೇಶಕರುಗಳಾದ ಟಿ.ಎಸ್. ನಿರಂಜನ್, ಟಿ.ಜೆ. ಗಿರೀಶ್, ಪಿ.ರವಿಶಂಕರ್ ಮತ್ತು ಟಿ.ಎಸ್. ಷಣ್ಮುಖಸ್ವಾಮಿ ರವರುಗಳು ನೀಡಿದರು.



ಚಾರ್ಟರ್ಡ್ ಸಹಕಾರಿ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್‌ನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಕೆ.ಬಿ. ಶಿವಣ್ಣ ರವರು ಮಹಾಮಂಡಳದ ಪ್ರಭಾರ ಅಧೀಕ್ಷಕರಾದ ಶ್ರೀ ಆರ್.ಹೆಚ್. ಕುಮಾರ್ ರವರಿಗೆ ಸಲ್ಲಿಸಿದರು.

## ಶ್ರೀ ದುರ್ಗಾದೇವಿ ಮಹಿಳಾ ಸಹಕಾರಿ ಬ್ಯಾಂಕ ನಿ., ಕಾರವಾರ : ಶಿರಸಿ ಶಾಖೆಯ ಉದ್ಘಾಟನಾ ಸಮಾರಂಭ

ಶ್ರೀ ದುರ್ಗಾದೇವಿ ಮಹಿಳಾ ಸಹಕಾರಿ ಬ್ಯಾಂಕ ನಿ., ಕಾರವಾರ ಇದರ 2ನೇ ಶಾಖೆಯನ್ನು ವಿವೇಕಾನಂದ ನಗರ ಶಿರಸಿಯಲ್ಲಿ ಇತ್ತೀಚೆಗೆ ಉದ್ಘಾಟಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಶ್ರೀರೂಪಾ ಹೆಗಡೆ, ಉಪಾಧ್ಯಕ್ಷರಾದ ಶ್ರೀಮತಿ ರೇಖಾ ಹೆಗಡೆ, ಆಡಳಿತ ಮಂಡಳಿಯ ಎಲ್ಲಾ ಸದಸ್ಯರು, ಹಾಗೂ ಮಾಜಿ ಕೇಂದ್ರ ಸಚಿವರು, ಮಾಜಿ ಸಂಸದರು ಮತ್ತು ಕದಂಬ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಅನಂತಕುಮಾರ ಹೆಗಡೆ, ಶಾಸಕರಾದ ಶ್ರೀ ಶಿವರಾಮ ಹೆಬ್ಬಾರ, ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತರಾದ ಶ್ರೀ ಶಿವರಾಮ ಶಂಕರ ಭಟ್, ಹಿರಿಯರಾದ ಬಾಬು ಹನುಮಂತಿಕರ,  ಹಿರಿಯ ಸಹಕಾರಿಗಳು ಮತ್ತು ಕದಂಬ ಸಂಸ್ಥೆ ನಿರ್ದೇಶಕರಾದ ಶ್ರೀ ಶ್ರೀಪಾದ ಎನ್ ಭಟ್ ಬಿಸಲಕೊಪ್ಪ, ಉಪಸ್ಥಿತರಿದ್ದರು.




## 9ನೇ ವೇತನ ಪರಿಷ್ಕರಣೆಯ ಕುರಿತು ಬೆಂಗಳೂರು ನಗರದ ಆಯ್ದ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆ

ದಿನಾಂಕ : 15.11.2024ರಂದು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಆಡಳಿತ ಮಂಡಳಿ ಸಭಾಂಗಣದಲ್ಲಿ 9ನೇ ವೇತನ ಪರಿಷ್ಕರಣೆ ಕುರಿತು ಆಯ್ದ ಪಟ್ಟಣ ಸಹಕಾರ ಬ್ಯಾಂಕುಗಳ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಸಭೆಯು 9ನೇ ವೇತನ ಪರಿಷ್ಕರಣೆ ಸಮಿತಿ ಸಭೆಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ನವರ ಅಧ್ಯಕ್ಷತೆಯಲ್ಲಿ ಜರುಗಿತು.



## ಸಹಕಾರ ಸಪ್ತಾಹ ಆಚರಣೆ



ತುಮಕೂರು ವೀರಶೈವ ಸಹಕಾರ ಬ್ಯಾಂಕಿನಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ದಿನದಂದು ಬ್ಯಾಂಕಿನ ಅಧ್ಯಕ್ಷರಾದ ಕೆ.ಜೆ. ರುದ್ರಪ್ಪನವರು ಸಹಕಾರಿ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಕೆ.ಮಲ್ಲಿಕಾರ್ಜುನಯ್ಯನವರು, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ಟಿ.ಎಸ್. ನಿರಂಜನ್ ಹಾಗೂ ನಿರ್ದೇಶಕ ಮಂಡಳಿಯವರು ಬ್ಯಾಂಕಿನ ಸಿಇಒ, ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಬೆಂಗಳೂರು ಇದರ ಮೂರನೇ ಶಾಖೆ ಹೇರೋಹಳ್ಳಿಯಲ್ಲಿ ಉದ್ಘಾಟನೆ

ದಿನಾಂಕ : 18.11.2024 ರಂದು ಬೆಂಗಳೂರಿನ ಶ್ರೀ ಲಕ್ಷ್ಮೀನಾರಾಯಣ ಕೋ-ಆಪರೇಟಿವ್ ಬ್ಯಾಂಕಿನ 3ನೇ ಶಾಖೆಯನ್ನು ಹೇರೋಹಳ್ಳಿಯಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠ, ಕೆಂಗೇರಿ, ಬೆಂಗಳೂರು ಇವರ ದಿವ್ಯ ಸಾನಿಧ್ಯದಲ್ಲಿ, ಬ್ಯಾಂಕಿನ ಅಧ್ಯಕ್ಷರಾದ ಶ್ರೀ ನಂಜೇಗೌಡರವರ ಅಧ್ಯಕ್ಷತೆಯಲ್ಲಿ, ಬ್ಯಾಂಕಿನ ಹಿರಿಯ ಸಹಕಾರಿ, ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರು ಆದ ಶ್ರೀ ಕೃಷ್ಣೇಗೌಡರವರು ಉದ್ಘಾಟಿಸಿದರು.




ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಸಿ.ಹೆಚ್.ಶ್ರೀನಿವಾಸ್, ನಿರ್ದೇಶಕರುಗಳಾದ ಶ್ರೀ ಕೇಶವ ಎ., ಶ್ರೀ ಅಶೋಕ್ ಡಿ., ಶ್ರೀ ಶ್ರೀನಿವಾಸಮೂರ್ತಿ ಆರ್., ಶ್ರೀ ರಾಮಯ್ಯ ಕೆ., ಶ್ರೀ ದೇವರಾಜು ಜಿ., ಶ್ರೀ ಕೃಷ್ಣ ಜಿ., ಶ್ರೀಮತಿ ರಾಜೇಶ್ವರಿ ಆರ್., ಶ್ರೀಮತಿ ಸುರೇಖಾ ಡಿ.ಆರ್., ಶ್ರೀ ವೆಂಕಟೇಶ್ ಜಿ.ಟಿ. (ರೇವಣ್ಣ), ಶ್ರೀ ದೀಪಕ್ ಬಿ.ಆರ್., ಶ್ರೀ ಗೋವಿಂದಪ್ಪ ಮಂಜುನಾಥ್, ಶ್ರೀ ಶಿವಪ್ರಸಾದ್ ಬಿ.ಎಸ್. ಹಾಗೂ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಮಹೇಶ್ ಕುಮಾರ್ ಬಿ.ಎಂ. ಮತ್ತು ಬ್ಯಾಂಕಿನ ಸಿಬ್ಬಂದಿಗಳು ಹಾಜರಿದ್ದರು.

ಇದೆ ವೇಳೆ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಪೂರಕವಾಗುವಂತಹ "ಸಹಕಾರಿಗಳಿಗಾಗಿ ಸಹಕಾರ" (Co-operation to Co-Operatives) ಎಂಬ ಧ್ಯೇಯ ಮೇಲೆ ಸಹಕಾರಿ ಸಂಘ ಸಂಸ್ಥೆಗಳಿಗಾಗಿ ವಿಶಿಷ್ಟವಾದ ಚಾಲ್ತಿ ಖಾತೆಯನ್ನು ಅನಾವರಣಗೊಳಿಸಲಾಯಿತು. ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಈ ಚಾಲ್ತಿ ಖಾತೆ ಹೊಂದುವ ಸಹಕಾರ ಸಂಸ್ಥೆಗಳಿಗೆ ಚಾಲ್ತಿ ಖಾತೆಯಲ್ಲಿನ ಬಾಕಿ ಮೊತ್ತಕ್ಕೆ ವಾರ್ಷಿಕ ಶೇಕಡಾ 2ರ ಬಡ್ಡಿ ನೀಡಲಾಗುವುದು ಹಾಗೂ ಸಹಕಾರ ಸಂಸ್ಥೆಗಳು ಇಡುವ ರೂ.50 ಲಕ್ಷ ಮೇಲ್ಪಟ್ಟ ಠೇವಣಿಗೆ ಶೇಕಡಾ 0.25ರ ಹೆಚ್ಚುವರಿ ಬಡ್ಡಿ ಹಾಗೂ ಇತರೆ ಬ್ಯಾಂಕಿಂಗ್ ಸೌಕರ್ಯಗಳಾದ QR ಕೋಡ್ ವ್ಯವಸ್ಥೆ, ಉಚಿತ NEFT, RTGS, BBPS ವ್ಯವಸ್ಥೆ ಒದಗಿಸಲಾಗುವುದೆಂದು ಘೋಷಿಸಿದರು.

# ಶ್ರೀ ಗುರುಸಿದ್ಧೇಶ್ವರ ಬ್ಯಾಂಕಿನಲ್ಲಿ ಅಧ್ಯಕ್ಷರಿಗೆ ಸನ್ಮಾನ




ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಪ್ರತಿಷ್ಠಿತ ಶ್ರೀ ಗುರುಸಿದ್ಧೇಶ್ವರ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಶಂಕರಣ್ಣ ಈ. ಮುನವಳ್ಳಿ ಇವರಿಗೆ ಸಹಕಾರ ಕ್ಷೇತ್ರದಲ್ಲಿನ ಸಾಧನೆಗಾಗಿ ಕರ್ನಾಟಕ ರಾಜ್ಯ ಸರಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರ ಗಣ್ಯರು ಮುನವಳ್ಳಿಯವರಿಗೆ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ ಬಳಿಯ ಮೈದಾನದಲ್ಲಿ ನವೆಂಬರ 17ರಂದು ಏರ್ಪಡಿಸಿದ್ದ ಸಹಕಾರ ಸಪ್ತಾಹ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದರು. ಇದರ ನಿಮಿತ್ಯ ಶ್ರೀ ಗುರುಸಿದ್ಧೇಶ್ವರ ಬ್ಯಾಂಕಿನಲ್ಲಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಅರವಿಂದ ಲಿಂಬಿಕಾಯಿ ಹಾಗೂ ಆಡಳಿತ ಮಂಡಳಿ ನಿರ್ದೇಶಕರಾದ ಶ್ರೀ ವೀರಣ್ಣ ಕಲ್ಲೂರ, ಶ್ರೀ ಎಫ್.ಸಿ. ಭೂಸದ, ಶ್ರೀ ಮಾರುತಿ ಜಾಧವ, ಶ್ರೀ ಮಹೇಶ ಸಿ. ಟೆಂಗಿನಕಾಯಿ, ಶ್ರೀ ವಿಜಯಾನಂದ ಬಿ. ಹೊಸಕೋಟಿ, ಶ್ರೀ ಲಕ್ಷ್ಮೀಕಾಂತ ಅ. ಪಾಟೀಲ, ಶ್ರೀಮತಿ ಪ್ರೇಮಾ ಆರಟ್ಟಿ, ಶ್ರೀಮತಿ ಗೀತಾ ಮುಳ್ಳಳ್ಳಿ, ಶ್ರೀ ಮಂಜುನಾಥ ಮುನವಳ್ಳಿ, ಶ್ರೀ ಉಮೇಶ ಅಪ್ಪೋಜಿ, ಶ್ರೀ ರಾಜಣ್ಣ ಬತ್ತಿ, CHARTERED ACCOUNTANT ರಾದ ಶ್ರೀ ಬಸವರಾಜ ಚೆನ್ನಿ ಹಾಗೂ ವಕೀಲರಾದ ಶ್ರೀ ಗುರು ಹಿರೇಮಠ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಪುತ್ತೂರು ಕೋ–ಆಪರೇಟಿವ್ ಟೌನ್ ಬ್ಯಾಂಕಿನ ನೂತನ ವಿಟ್ಲ ಶಾಖೆಯ ಉದ್ಘಾಟನೆ





1909ರಲ್ಲಿ ಪ್ರಾರಂಭವಾದ ಪುತ್ತೂರು ಕೋ–ಆಪರೇಟಿವ್ ಟೌನ್ ಬ್ಯಾಂಕ್‌ನ ಇತಿಹಾಸದಲ್ಲಿಯೇ ಒಂದು ಹೊಸ ಮೈಲಿಗಲ್ಲು. ತನ್ನ ಪ್ರಥಮ ಶಾಖೆಯನ್ನು ಬಂಟ್ವಾಳ ತಾಲೂಕಿನ ವಿಟ್ಲದಲ್ಲಿ ನವೆಂಬರ್ 14ನೇ ತಾರೀಖಿನಂದು ಪ್ರಾರಂಭಿಸಲಾಯಿತು. ಭಾರತೀಯ ರಿಸರ್ವ್ ಬ್ಯಾಂಕ್‌ನ ಹೊಸ ನಿಯಮದಂತೆ ಆರ್ಥಿಕ ಸುದೃಢ ಹಾಗೂ ಉತ್ತಮ ಆಡಳಿತದ ಬ್ಯಾಂಕ್ ಎಂದು ದೃಢೀಕರಿಸಲ್ಪಟ್ಟ ಬ್ಯಾಂಕು ತನ್ನ ಪ್ರಥಮ ಶಾಖೆಯನ್ನು ವಿಟ್ಲದಲ್ಲಿ ಪ್ರಾರಂಭಿಸುವ ಮೂಲಕ ತನ್ನ ಶಾಖೆಗಳ ಸಂಖ್ಯೆಯನ್ನು ಎರಡಕ್ಕೇರಿಸಿಕೊಂಡಿತು. ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ನೂತನ ಶಾಖೆಯನ್ನು ಉದ್ಘಾಟಿಸಿದರು.

ಕ್ಯಾಂಪ್ಕೊ ಮಾಜಿ ಅಧ್ಯಕ್ಷ ಎಸ್.ಆರ್. ಸತೀಶ್ಚಂದ್ರ ಭದ್ರತಾ ಕೋಶ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಸಂಜೀವ ಮಠಂದೂರು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿರ್ದೇಶಕ ಶಶಿಕುಮಾರ್ ರೈ ಬಾಲ್ಯೊಟ್ಟು, ವಿಟ್ಲ ಪಟ್ಟಣ ಪಂಚಾಯತ್ ಅಧ್ಯಕ್ಷ ಕರುಣಾಕರ ನಾಯ್ತೊಟ್ಟು ಭಾಗವಹಿಸಿ ಶುಭ ಹಾರೈಸಿದರು. ಬ್ಯಾಂಕಿನ ಅಧ್ಯಕ್ಷ.ಎನ್. ಕಿಶೋರ ಕೊಳತ್ತಾಯ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ವಿಶ್ವಾಸ ಶೆಣೈ ಸ್ವಾಗತಿಸಿ, ಬ್ಯಾಂಕಿನ ನಿರ್ದೇಶಕ ಚಂದ್ರಶೇಖರ ಬಪ್ಪಳಿಗೆ ಪ್ರಾಸ್ತಾವಿಕ ಭಾಷಣಗೈದರು. ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಶೇಖರ ಶೆಟ್ಟಿ ವಂದಿಸಿದರು. ಮಂಗಳೂರು ಸಂಸದ ಕ್ಯಾಪ್ಟನ್. ಬ್ರಿಜೇಶ್ ಚೌಟ ಆಗಮಿಸಿ ಶುಭ ಹಾರೈಸಿದರು. ಶಾಖಾಧಿಕಾರಿ ಚೇತನ್ ಯು.ಎನ್. ಕಾರ್ಯಕ್ರಮ ನಿರ್ವಹಿಸಿದರು. ಸಿಬ್ಬಂದಿಗಳಾದ ಪವನ್ ನಾಯಕ್ ಮತ್ತು ಉದಯ ಕುಮಾರ್ ಸಹಕರಿಸಿದರು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▶▶ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಒಬ್ಬ ಉದ್ಯೋಗಿ ಅನಾರೋಗ್ಯದ ಕಾರಣ ಎರಡು ತಿಂಗಳು ವೇತನವಿಲ್ಲದ ರಜೆ ಮೇಲಿದ್ದು ನಂತರ ಮೃತಪಟ್ಟಿದ್ದಾನೆ. ನೌಕರನ ಕೊನೆಯ ವರ್ಷದ ಸಕ್ರಿಯ ಸೇವೆಯಲ್ಲಿ ಪಡೆದ ಸರಾಸರಿ ಸಂಬಳದ ಆಧಾರದ ಮೇಲೆ ಆತನ ಗ್ರಾಚ್ಯುಯಿಟಿಯನ್ನು ಲೆಕ್ಕಹಾಕಬೇಕಾಗಿದೆ. ಮೇಲಿನ ಸಂದರ್ಭದಲ್ಲಿ ಸರಾಸರಿ ವೇತನವನ್ನು ಲೆಕ್ಕಹಾಕುವುದು ಹೇಗೆ? ಈ ಬಗ್ಗೆ ನಮಗೆ ಮಾರ್ಗದರ್ಶನ ನೀಡಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಒಬ್ಬ ಉದ್ಯೋಗಿಯು ವೇತನವಿಲ್ಲದ ರಜೆ ಮೇಲೆ ಇದ್ದಾಗ ಆತನ ವಾರ್ಷಿಕ ಸರಾಸರಿ ವೇತನವನ್ನು ಈ ಕೆಳಗಿನಂತೆ ಲೆಕ್ಕಹಾಕಲಾಗುವುದು.

ಎ) ವೇತನವಿಲ್ಲದ ರಜೆಯ ಎರಡು ತಿಂಗಳುಗಳನ್ನು ಹೊರತುಪಡಿಸಿ, ಉಳಿದ ಅವಧಿಯಲ್ಲಿ ಆತ ಪಡೆದ ಒಟ್ಟು ವೇತನವನ್ನು ಲೆಕ್ಕಹಾಕಿ.

ಬಿ) ಆತ ಕೆಲಸ ಮಾಡಿದ ತಿಂಗಳುಗಳನ್ನು ಲೆಕ್ಕಹಾಕಲು ವೇತನವಿಲ್ಲದ ರಜೆಯ ತಿಂಗಳುಗಳನ್ನು ಕಳೆಯಿರಿ.

ಸಿ) ಒಟ್ಟು ವೇತನವನ್ನು ಕೆಲಸ ಮಾಡಿದ ತಿಂಗಳುಗಳಿಂದ ಭಾಗಿಸಿದರೆ ಆತನ ಸರಾಸರಿ ವೇತನ ದೊರೆಯುವುದು.


ಉದಾಹರಣೆಗೆ, ಒಬ್ಬ ಉದ್ಯೋಗಿಗೆ ವರ್ಷದ ಹತ್ತು ತಿಂಗಳಲ್ಲಿ ರೂ.6,00,000 ವೇತನ ದೊರೆತಿದ್ದರೆ, ಆತನ ಸರಾಸರಿ ವೇತನ ರೂ.60,000 ಇರುತ್ತದೆ.

**02. ನಮ್ಮ ಬ್ಯಾಂಕಿನಲ್ಲಿ ರೂ.10ಲಕ್ಷದಷ್ಟು ಕೆಟ್ಟ ಮತ್ತು ಅನುಮಾನಾಸ್ಪದ ಸಾಲದ ಅನುವು ಹೆಚ್ಚುವರಿ ಇರುತ್ತದೆ. ಆಡಳಿತ ಮಂಡಳಿ ಹೆಚ್ಚುವರಿ ಅನುವನ್ನು ಲಾಭ ಮತ್ತು ನಷ್ಟ ಖಾತೆಗೆ ವರ್ಗಾಯಿಸಬಯಸುತ್ತಿದೆ. ಈ ರೀತಿ ಮಾಡುವುದರಿಂದ ಭಾರತೀಯ ರಿಜರ್ವ್ ಬ್ಯಾಂಕಿನ ಮಾರ್ಗಸೂಚಿಯನ್ನು ಉಲ್ಲಂಘಿಸಿದಂತಾಗುವುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಶಿವಮೊಗ್ಗ ಜಿಲ್ಲೆ.**

**ಉತ್ತರ :** ಹೆಚ್ಚುವರಿ ಇರುವ ಕೆಟ್ಟ ಮತ್ತು ಅನುಮಾನಾಸ್ಪದ ಸಾಲಗಳ ಮೇಲಿನ ಅನುವನ್ನು (BDDR) ಲಾಭ ಮತ್ತು ನಷ್ಟ ಖಾತೆಗೆ ವರ್ಗಾಯಿಸಬಹುದು. ಆದರೆ, ಹೆಚ್ಚುವರಿ ಅನುವನ್ನು ಬ್ಯಾಂಕಿನ ನಿವ್ವಳ ಸುಸ್ತಿ ಸಾಲಗಳನ್ನು ಕಡಿಮೆ ಮಾಡಲು ಉಪಯೋಗಿಸುವುದು ಬ್ಯಾಂಕಿನ ಹಿತದೃಷ್ಟಿಯಿಂದ ಉಚಿತ.

## ಆರ್ಥಿಕ ಬೆಳವಣಿಗೆ ಉತ್ತೇಜಿಸಲು ಬಡ್ಡಿ ದರ ಇಳಿಸುವಂತೆ ಆರ್‌ಬಿಐಗೆ ಕೇಂದ್ರ ಸಚಿವರಿಂದಲೇ ಸಲಹೆ



**ಮುಂಬಯಿ :** ದೇಶದ ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡಲು ಭಾರತೀಯ ರಿಸರ್ವ್ ಬ್ಯಾಂಕ್ ರೆಪೋ ದರ ಕಡಿತಕ್ಕೆ ಮುಂದಾಗಬೇಕಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಒತ್ತಾಯಿಸಿದ್ದಾರೆ. ರೆಪೋ ದರ ಕಡಿತದ ಬಗ್ಗೆ ನಿರ್ಧಾರ ಕೈಗೊಳ್ಳುವಾಗ ಆಹಾರ ಹಣದುಬ್ಬರದ ಸ್ಥಿತಿಗತಿ ಅವಲೋಕಿಸುವುದು ಸಂಪೂರ್ಣ ದೋಷಪೂರಿತ ಸಿದ್ಧಾಂತವಾಗಿದೆ ಎಂದಿದ್ದಾರೆ.

ಭಾರತದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಈ ವರ್ಷದ ಆರಂಭದಲ್ಲಿ ಮಂಡಿಸಿದ ಆರ್ಥಿಕ ಸಮೀಕ್ಷೆಯಲ್ಲಿ ವಿತ್ತೀಯ ನೀತಿ ಚೌಕಟ್ಟಿನಾಚೆಗೆ ಹಣದುಬ್ಬರವನ್ನಿಡಬೇಕು. ಏಕೆಂದರೆ ಇದು ಬೇಡಿಕೆಗಿಂತ ಪೂರೈಕೆಯಿಂದ ಹೆಚ್ಚು ಪ್ರಭಾವಿತವಾಗಿದೆ, ಎಂಬ ಸಲಹೆಯನ್ನು ಮಂಡಿಸಿದ್ದರು. ಇದನ್ನು ಗೋಯಲ್ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು ಎಂಬುದು ಗಮನಾರ್ಹ.

ದೇಶದ ಹಣದುಬ್ಬರದ ಗುರಿ ಮತ್ತು ರೆಪೋ ದರ ನಿಗದಿಗೆ ಸಂಬಂಧಿಸಿದಂತೆ ಆರ್‌ಬಿಐ ರೂಪಿಸಿರುವ ನೀತಿ ಚೌಕಟ್ಟಿನ ಬಗ್ಗೆ ಪರಾಮರ್ಶೆ ನಡೆಸುವಂತೆ ಕೇಂದ್ರ ಸಚಿವರೊಬ್ಬರು ಹೇಳಿಕೆ ನೀಡಿರುವುದು ಇದೇ ಮೊದಲು. ಖಾಸಗಿ ವಾಹಿನಿಯೊಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, "ಆರ್ಥಿಕತೆ ಬೆಳವಣಿಗೆಗೆ ಉತ್ತೇಜನ ನೀಡುವ ಅಗತ್ಯವಿದೆ. ಹಾಗಾಗಿ, ಆರ್‌ಬಿಐ ರೆಪೋ ದರ ಕಡಿತಗೊಳಿಸಲಿದೆ ಎಂಬ ಭರವಸೆ ನನಗಿದೆ. ಬಡ್ಡಿ ದರ ಕಡಿತಗೊಳಿಸಬೇಕು ಎಂಬುದು ಕೇಂದ್ರ ಸರಕಾರದ ಒತ್ತಾಯವಲ್ಲ. ನನ್ನ ವೈಯಕ್ತಿಕ ಸಲಹೆಯಾಗಿದೆ," ಎಂದಿದ್ದಾರೆ.

ದೇಶದ ಚಿಲ್ಲರೆ ಹಣದುಬ್ಬರವು ಅಕ್ಟೋಬರ್‌ನಲ್ಲಿ 14 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿತು, ಮುಖ್ಯವಾಗಿ ತರಕಾರಿ ಬೆಲೆಗಳ ಏರಿಕೆಯಿಂದ ಪ್ರೇರಿತವಾಗಿದೆ. ಇದು ಮುಂದಿನ ತಿಂಗಳು ಆರ್‌ಬಿಐನಿಂದ ಬಡ್ಡಿ ದರ ಕಡಿತದ ಭರವಸೆಯನ್ನು ಕಡಿಮೆ ಮಾಡಿದೆ. ಆರ್‌ಬಿಐ ಗ್ರಾಹಕರ ಬೆಲೆ ಸೂಚ್ಯಂಕವನ್ನು ಗಮನಿಸುತ್ತದೆ. ಇದು ಶೇ. 4ರಲ್ಲಿ ಇದ್ದರೆ ಮಾತ್ರ ಬಡ್ಡಿ ದರ ಇಳಿಕೆಗೆ ಮುಂದಾಗುವುದಾಗಿ ಈಗಾಗಲೇ ಸ್ಪಷ್ಟಪಡಿಸಿದೆ.

**ಪ್ರತಿಕ್ರಿಯೆಗೆ ಗವರ್ನರ್ ನಕಾರ :** ಡಿಸೆಂಬರ್‌ನಲ್ಲಿ ನಡೆಯಲಿರುವ ಹಣಕಾಸು ನೀತಿ ಸಮಿತಿ ಸಭೆಯು ರೆಪೋ ದರ ಕಡಿತದ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ. ಸಚಿವ ಪಿಯೂಷ್ ಗೋಯಲ್ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಲು ಅವರು ನಿರಾಕರಿಸಿದರು.

ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು 14 ತಿಂಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, "ಕೆಲವು ಅಡೆತಡೆ ಹೊರತಾಗಿಯೂ ಹಣದುಬ್ಬರವು ಇಳಿಕೆಯ ಹಾದಿಗೆ ಮರಳಿದೆ," ಎಂದಿದ್ದಾರೆ. "ಅಮೆರಿಕದಲ್ಲಿ ಬಾಂಡ್‌ಗಳ ಮೇಲಿನ ಗಳಿಕೆ ಏರಿಕೆಯಾಗುತ್ತಿದೆ. ಸರಕುಗಳ ಬೆಲೆಯಲ್ಲಿ ಏರಿಳಿತವಾಗಿದೆ. ಜಾಗತಿಕ ಬಿಕ್ಕಟ್ಟಿನ ನಡುವೆಯೂ ಭಾರತದ ಆರ್ಥಿಕತೆ ಬೆಳವಣಿಗೆಯು ಸರಾಗವಾಗಿ ಚಲಿಸುತ್ತಿದೆ" ಎಂದು ತಿಳಿಸಿದ್ದಾರೆ.

# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಔಷಧೀಯ ಸಸ್ಯಗಳ ಸ್ವರ್ಗವಾಗಿರುವ ಗದಗ ಪಟ್ಟಣದ ಸನಿಹದ ಕಪ್ಪತಗುಡ್ಡ ವನ್ಯಜೀವಿ ಅಭಯಾರಣ್ಯ ವಿವಿಧ ಅಪರೂಪದ ತೋಳಗಳು, ಹೈನಾಗಳು ಮತ್ತು ಹುಲ್ಲೆಗಳು ಸೇರಿದಂತೆ 18 ರೀತಿಯ ಪ್ರಾಣಿಗಳಿಗೆ ನೆಲೆಯಾಗಿದೆ. ಹುಲ್ಲೆಗಳಲ್ಲಿ, ನಾಲ್ಕು ಕೊಂಬಿನ ಹುಲ್ಲೆಗಳು, ಚಿಂಕಾರಗಳು ಮತ್ತು ಕಡವೆ ಸೇರಿವೆ. ಹೀಗೆ ಮೂರು ಜಾತಿಯ ಹುಲ್ಲೆಗಳು ಒಂದೇ ಪ್ರದೇಶದಲ್ಲಿರುವ ಏಕೈಕ ಸ್ಥಳ ಇದಾಗಿದ್ದು, ಸುಮಾರು 400 ಔಷಧೀಯ ಸಸ್ಯ ಪ್ರಭೇದಗಳನ್ನು ಹೊಂದಿದೆ ಎಂದು ಅಧ್ಯಯನದ ತಂಡವೊಂದು ತಿಳಿಸಿದೆ.
- ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿದೇಶದಿಂದ ಅಕ್ರಮವಾಗಿ ಸಾಗಾಟ ಮಾಡುತ್ತಿದ್ದ ಪ್ರಯಾಣಿಕರೊಬ್ಬರ ಬ್ಯಾಗಿನಲ್ಲಿ ಉಡ, ಆಮೆ, ಉರಗಗಳು ಪತ್ತೆಯಾಗಿದ್ದು, ಆ ಪ್ರಾಣಿಗಳನ್ನು ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.
- ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಮಂಟೂರು ಎಂಬ ಪುಟ್ಟ ಹಳ್ಳಿಯ 48ರ ಹರೆಯದ ರೈತ ಮಹಿಳೆ ಹಾಗೂ ಎರಡು ಬಾರಿ ಗ್ರಾಮ ಪಂಚಾಯಿತಿ ಸದಸ್ಯೆಯಾಗಿರುವ ಮಲ್ಲವ್ವ ಭೀಮಪ್ಪ ಮೇಟಿ ಎಂಬ ರೈತ ಮಹಿಳೆಯೊಬ್ಬರು ತಮ್ಮ ಸಮುದಾಯದ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಆಕಾಂಕ್ಷಿಗಳನ್ನು ಪೂರೈಸಲು ಗ್ರಂಥಾಲಯವನ್ನು ಸ್ಥಾಪಿಸಿ ಇತರರಿಗೆ ಮಾದರಿಯಾಗಿದ್ದಾರೆ.
- ದಿಲ್ಲಿಯಲ್ಲಿ ವಾಯು ಗುಣಮಟ್ಟ ಮತ್ತಷ್ಟು ಕುಸಿದಿದ್ದು, ಆಗ್ರಾದಲ್ಲಿನ ಅಮೃತಶಿಲೆಯ ತಾಜ್‌ಮಹಲ್ ಕಪ್ಪಾಗಿ ಗೋಚರಿಸುತ್ತಿದೆ. ಎಷ್ಟೇ ನಿಯಂತ್ರಣ ಹೇರಿದರೂ ದೆಹಲಿಯ ವಾಯು ಗುಣಮಟ್ಟದಲ್ಲಿ ಚೇತರಿಕೆ ಕಾಣುತ್ತಿಲ್ಲ.
- ಬೆಂಗಳೂರಿನ ಸಾಂಸ್ಕೃತಿಕ ಹಿರಿಮೆಯ ಸಂಕೇತವಾಗಿರುವ ಬಸವನಗುಡಿ ಕಡಲೆಕಾಯಿ ಪರಿಷೆ ಇದೇ ನವೆಂಬರ್ 25ರಂದು ಸಂಪ್ರದಾಯದಂತೆ ಸೋಮವಾರ ಬಸವನ ಉತ್ಸವ ಮೂರ್ತಿಗೆ ಕಡಲೆಕಾಯಿ ಅಭಿಷೇಕ ಮಾಡುವ ಮೂಲಕ ಪರಿಷೆಗೆ ಚಾಲನೆ ನೀಡಲಾಗಿದ್ದು, ಒಂದು ವಾರಗಳ ಕಾಲ ಕಡಲೆಕಾಯಿ ಪರಿಷೆ ನಡೆಯಲಿದೆ.

## ಓದುಗರ ಅನಿಸಿಕೆ...




**ಭರವಸೆಯ ಆಶಾಕಿರಣ ಮೂಡಿದೆ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾವು ಸಹಕಾರ ಚಳವಳಿ ಮತ್ತು ಸಹಕಾರ ತತ್ವದ ಪರವಾಗಿ ಇರುವುದಾಗಿಯೂ ಸಹಕಾರ ಇಲಾಖೆಯ ನೇಮಕಾತಿಗಳಲ್ಲಿ ಕೋ–ಆಪರೇಟೀವ್ ಮ್ಯಾನೇಜ್‌ಮೆಂಟ್ ಪದವಿ, ಡಿಪ್ಲೊಮಾ ಪಡೆದವರಿಗೆ ಮೀಸಲಾತಿ ನೀಡುವ ವಿಷಯವನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿರುವುದು ಈ ವಿಷಯದಲ್ಲಿ ಪದವಿ, ಡಿಪ್ಲೊಮಾ ಪಡೆದವರಿಗೆ ಭರವಸೆಯ ಆಶಾಕಿರಣ ಮೂಡಿದೆ.

**▸▸ ರಂಗಧಾಮಯ್ಯ ಕೆ.ಪಿ., ಮಧುಗಿರಿ**

**ಹಾರ್ದಿಕ ಅಭಿನಂದನೆಗಳು :** ಈ ಬಾರಿಯ ಸಹಕಾರ ಸಪ್ತಾಹದಲ್ಲಿ ನಮ್ಮ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರು ಹಾಗೂ ವಿವಿಧ ಸಹಕಾರ ಬ್ಯಾಂಕುಗಳ ಅಧ್ಯಕ್ಷರು, ಉಪಾಧ್ಯಕ್ಷರುಗಳು ಸೇರಿದಂತೆ ಒಂಬತ್ತು ಮಹನೀಯರು ಸಹಕಾರ ರತ್ನ ಪ್ರಶಸ್ತಿಗೆ ಪುರಸ್ಕೃತರಾಗಿರುವುದು ನಮಗೆಲ್ಲ ಸಂತಸ ತಂದಿದೆ. ಪ್ರಶಸ್ತಿ ಪುರಸ್ಕೃತರುಗಳಿಗೆ ಎಲ್ಲ ಸಹಕಾರಿಗಳ ಪರವಾಗಿ ನಮ್ಮ ಹಾರ್ದಿಕ ಅಭಿನಂದನೆಗಳು.

**▸▸ ಆರ್. ಲಕ್ಷ್ಮೀಕಾಂತ, ಚಿತ್ರದುರ್ಗ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.